# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ವಿರಾಜಪೇಟೆ

## ಸಿ.ಸಿ.176/2023

**ಪಿರ್ಯಾದುದಾರರು** **ವಿರುದ್ಧ** **ಆರೋಪಿ**

ವಿರಾಜಪೇಟೆ ನಗರ ಪೋಲೀಸ್ ಠಾಣೆ ಸುಬ್ರಮಣಿ ಬಿ.ಪಿ

:: **ದೋಷಾರೋಪಣೆ** ::

**ಶ್ರೀ ಸಂತೋಷ ಕೊಠಾರಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,ವಿರಾಜಪೇಟೆ, ಆದ ನಾನು ನಿನ್ನ ಮೇಲೆ ಅಂದರೆಃ**

ಸುಬ್ರಮಣಿ ಬಿ.ಪಿ,ತಂದೆಃ ಪೂವಯ್ಯ,33 ವರ್ಷ,
ವಾಸಃ ಬಾಳೆಲೆ, ಪೊನ್ನಂಪೇಟೆ ತಾಲ್ಲೂಕು.

**ಈ ಕೆಳಗಿನಂತೆ ದೋಷಾರೋಪಣೆ ಹೊರೆಸಿದ್ದೇನೆಃ**

ವಿರಾಜಪೇಟೆ ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಪಂಜರಿಪೇಟೆಯಲ್ಲಿ ಆರೋಪಿಯಾದ ನೀವು ಸಾಕ್ಷಿ-1ರವರೊಂದಿಗೆ ವಾಸವಾಗಿದ್ದು, ಆರೋಪಿಯಾದ ನೀವು ಪವಿತ್ರ @ ರಶ್ಮಿ ಎಂಬುವವರೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ ವಿಚಾರದಲ್ಲಿ ಸಾಕ್ಷಿ-1ರವರು ಕೇಳಿದಾಗ ಜಗಳ ತೆಗೆದು ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ 498(ಎ) ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಎರಡನೇಯದಾಗಿ ಮೇಲೆ ಹೇಳಿದಂತೆ ಆರೋಪಿಯಾದ ನೀವು ಕೃತ್ಯವನ್ನು ಮುಂದುವರೆಸುತ್ತಾ ದಿನಾಂಕ 07.10.2022ರಂದು ರಾತ್ರಿ 8.00 ಗಂಟೆಗೆ ಸಾಕ್ಷಿ-1ರವರಿಗೆ ಕೈಯಿಂದ ಶರೀರಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಪಡಿಸಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ 323ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಕೊನೇಯದಾಗಿ ಮೇಲೆ ಹೇಳಿದಂತೆ ಆರೋಪಿಯಾದ ನೀವು ಕೃತ್ಯವನ್ನು ಮುಂದುವರೆಸುತ್ತಾ ಸಾಕ್ಷಿ-1ರವರೊಂದಿಗೆ ಜಗಳ ತೆಗೆದು ತಾನು ಯಾರ ಜೊತೆಯಲ್ಲಾದರೂ ಸಂಬಂಧವನ್ನು ಇಟ್ಟುಕೊಳ್ಳುತ್ತೇನೆ ನೀನು ಯಾರು ಕೇಳಲು ಎಂದು ಹೇಳಿ ಸೂಳೆ, ಮುಂಡೆ ಎಂಬುವುದಾಗಿ ಅವಾಚ್ಯ ಶಬ್ಧಗಳಿಂದ ಬೈದಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ 504 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೇಲಿನ ಆರೋಪಕ್ಕೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

ಪ್ರ-1: ಮೇಲಿನ ದೋಷಾರೋಪಣೆಯನ್ನು ಓದಿ, ತಿಳಿಸಿ ಹೇಳಿದ್ದು, ನಿಮಗೆ ಅರ್ಥವಾಗಿದೆಯೆ?

ಉತ್ತರಃ

ಪ್ರ–2: ನೀವು ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಛಿಸುತ್ತೀರೋ?

ಉತ್ತರಃ

(ಮೇಲಿನ ದೋಷಾರೋಪಣೆಯನ್ನು ಆರೋಪಿಗಳಿಗೆ ಓದಿ, ತಿಳಿಸಿ ಹೇಳಿದ ನಂತರ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ).

ದಿನಾಂಕ 19 ನೇ ಡಿಸೆಂಬರ್ ಮಾಹೆ 2023.

ಸಹಿಃ

**(ಸಂತೋಷ ಕೊಠಾರಿ)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂ., ವಿರಾಜಪೇಟೆ.

**ಸಿ.ಸಿ.390/2023**

**ಪಿರ್ಯಾದುದಾರರು** **ವಿರುದ್ಧ** **ಆರೋಪಿಗಳು**

ಸಿದ್ದಾಪುರ ಪೋಲೀಸ್ ಠಾಣೆ ಮೊಹಮ್ಮದ್ ಶಕೀರ್ ಪಿ.ಎಸ್ ಮತ್ತಿಬ್ಬರು

**:: ಆ ಪಾ ದ ನೆ ::**

**ಶ್ರೀ ಸಂತೋಷ ಕೊಠಾರಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,ವಿರಾಜಪೇಟೆ, ಆದ ನಾನು ನಿನ್ನ ಮೇಲೆ ಅಂದರೆ:**

3) ಸಜಿನ ಪಿ.ಎಸ್, ಗಂಡಃ ಆಸೀಫ , 28 ವರ್ಷ,
ವಾಸಃ ಕೊಂಡಂಗೇರಿ, ಹಾಲುಗುಂದ ಗ್ರಾಮ,
ವಿರಾಜಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

ಪ್ರ-1: ಮೇಲಿನ ದೋಷಾರೋಪಣೆಯನ್ನು ಓದಿ, ತಿಳಿಸಿ ಹೇಳಿದ್ದು, ನಿಮಗೆ ಅರ್ಥವಾಗಿದೆಯೆ?

ಉತ್ತರಃ

ಪ್ರ-2: ನೀವು ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಛಿಸುತ್ತೀರೋ?

ಉತ್ತರಃ

(ಮೇಲಿನ ದೋಪಾರೋಪಣೆಯನ್ನು ಆರೋಪಿಗಳಿಗೆ ಓದಿ, ತಿಳಿಸಿ ಹೇಳಿದ ನಂತರ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ).

15 ನೇ ಡಿಸೆಂಬರ್ ಮಾಹೆ 2023.

**(ಸಂತೋಷ ಕೊಠಾರಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ.